# 1 ನೇ ಹೆಚ್ಚುವರಿ  ಸಿವಿಲ್ ನ್ಯಾಯಾಧೀಶರು ಮತ್ತು ಪ್ರದನ್ಯಾದಂ.,ರವರ ನ್ಯಾಯಾಲಯ, ಕಡೂರು.

**C.C. No**. 2767/2022

**ಸಾಕ್ಷಿಯನ್ನು ದಿಃ 04.10.2025 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು**

| | | |
|---|---|---|
| ಸಾಕ್ಷಿಯ ಹೆಸರು | ಮಮತ ಎಲ್. | ಡಿಡಬ್ಲ್ಯೂ 1 |
| ಗಂಡನ  ಹೆಸರು | ಪಾಲಿಕಾರ್ಪ್ | |
| ವಯಸ್ಸು | 42 ವರ್ಷ | |
| ಉದ್ಯೋಗ | ಮುಖ್ಯ ಶಿಕ್ಷಕಿ, ಕನ್ನಿಕ ಕಾವೇರಿ ಹಿರಿಯ ಪ್ರಾಥಮಿಕ ಶಾಲೆ, ಹೆಬ್ಬಾಳ್, ಮೈಸೂರು | |
| ವಾಸ | ಮೈಸೂರು | |

**ಸಾಕ್ಷಿಯ ಸ್ವಪ್ರಮಾಣಿತ ಹೇಳಿಕೆಃ**

ಮೈಸೂರಿನ ವಿದ್ಯಾನಗರದ 5 ನೇ ಕ್ರಾಸ್ ನಲ್ಲಿರುವ ಮನೆ ಸಂ.287 ರಲ್ಲಿ ಬಾಡಿಗೆ ಮನೆಯಲ್ಲಿ ವಾಸವಾಗಿದ್ದು, ತದನಂತರ ಮೈಸೂರಿನ ಜ್ಯೋತಿನಗರದಲ್ಲಿರುವ ಪೊಲೀಸ್ ಕ್ವಾಟ್ರಸ್‌ನ  'ಎ' ಬ್ಲಾಕ್ ನಲ್ಲಿರುವ ಮನೆ ನಂ.50 ರಲ್ಲಿ ನನ್ನ ತಂಗಿಯು ವಾಸವಾಗಿದ್ದು, ಅದೇ ಮನೆಗೆ ನಾನು ಹಿಂದಿನ ಮನೆಯನ್ನು ದಿನಾಂಕ 11.09.2017 ರಂದು ಖಾಲಿ ಮಾಡಿಕೊಂಡು ವಾಸಕ್ಕೆ ಬಂದಿದ್ದು, ಸದರಿ ಸಂದರ್ಭದಲ್ಲಿ ಮನೆ ಖಾಲಿ ಮಾಡುವಾಗ ನನಗೆ ಹಾಗೂ ನನ್ನ ಗಂಡನಿಗೆ ಸೇರಿದ ದಾಖಲಾತಿಗಳು ಕಳೆದು ಹೋಗಿರುತ್ತವೆ. ಅವುಗಳೆಂದರೆ ನನಗೆ ಸೇರಿದ ಮೈಸೂರಿನ ಹೆಬ್ಬಾಳ್ ಕೈಗಾರಿಕಾ ಪ್ರದೇಶದಲ್ಲಿರುವ ಎಸ್.ಬಿ.ಐ. ಬ್ಯಾಂಕಿನಲ್ಲಿ ನಾನು ಖಾತೆ ಹೊಂದಿದ್ದು ಸದರಿ ಖಾತಾ ಸಂ.30860500884 ಆಗಿದ್ದು, ಸದರಿ ಖಾತೆಗೆ ಸಂಬಂಧಿಸಿದ ಚೆಕ್ಕುಗಳ ನಂ.419201 ರಿಂದ 419225 ರವರೆಗಿನ ಚೆಕ್ಕುಗಳು ಹಾಗೂ ಅದೇ ಖಾತೆಗೆ ಸೇರಿದ ಮತ್ತೊಂದು ಚೆಕ್ ಪುಸ್ತಕವನ್ನು ಪಡೆದಿದ್ದು, ಸದರಿ ಚೆಕ್ಕುಗಳ

ನಂ.329556 ರಿಂದ 329564 ರವರೆಗಿನ ಚೆಕ್ಕುಗಳು ಹಾಗೂ ಅದೇ ಖಾತೆಗೆ ಸೇರಿದ ಮತ್ತೊಂದು ಚೆಕ್ ಪುಸ್ತಕವನ್ನು ಪಡೆದಿದ್ದು, ಸದರಿ ಚೆಕ್ಕುಗಳ ನಂ.329566 ರಿಂದ 329579 ರವರೆಗಿನ ಚೆಕ್ಕುಗಳು ಕಳೆದು ಹೋಗಿರುತ್ತವೆ. ಸದರಿ ಚೆಕ್ಕುಗಳ ಪೈಕಿ ಕೆಲವು ಚೆಕ್ಕುಗಳಿಗೆ ತುರ್ತು ಸಂದರ್ಭದಲ್ಲಿ ಬೇಕಾಗುತ್ತದೆ ಎಂದು ನನ್ನ ಸಹಿಗಳನ್ನು ಮಾಡಿ ಇಟ್ಟಿರುತ್ತೇನೆ. ಸದರಿ ಸಂದರ್ಭದಲ್ಲಿ ನನ್ನ ಮೂಲ ದ್ವಿಚಕ್ರ ವಾಹನಾ ಚಾಲನಾ ಪರವಾನಿಗೆಯೂ ಸಹ ಕರೆದು ಹೋಗಿರುತ್ತದೆ. ನನ್ನ ಗಂಡನಿಗೆ ಸೇರಿದ ಮೈಸೂರಿನ ವಿ.ವಿ.ಮೊಹಲ್ಲ ಆಕ್ಸಿಸ್ ಬ್ಯಾಂಕಿಗೆ ಸೇರಿದ ಚೆಕ್ ಪುಸ್ತಕ ಕಳೆದು ಹೋಗಿರುತ್ತದೆ.

ತದನಂತರ ನಾವು ಮನೆಯನ್ನು ಬದಲಾಯಿಸಿದ ನಂತರ ಸದರಿ ಚೆಕ್ ಪುಸ್ತಕಗಳನ್ನು ಹುಡುಕಿರುತ್ತೇವೆ, ಆದರೆ ಸಿಕ್ಕಿರುವುದಿಲ್ಲ. ಆದ್ದರಿಂದ ಮೈಸೂರಿನ ನಸರಬಾದ್ ಪೊಲೀಸ್ ಠಾಣೆಯಲ್ಲಿ ಚೆಕ್ಕುಗಳು ಕಾಣೆಯಾಗಿರುವ ಬಗ್ಗೆ ದಿನಾಂಕ 19.11.2017 ರಂದು ದೂರನ್ನು ನೀಡಿರುತ್ತೇವೆ. ನಂತರ ಪೊಲೀಸರು ನಮ್ಮ ದೂರನ್ನು ದಾಖಲಿಸಿಕೊಂಡು ಸ್ವೀಕೃತಿಯನ್ನು ನಮಗೆ ನೀಡಿರುತ್ತಾರೆ. ನಂತರ ನಾನು ಖಾತೆ ಹೊಂದಿರುವಂತಹ ಎಸ್.ಬಿ.ಐ. ಬ್ಯಾಂಕಿಗೆ ಹೋಗಿ ನನ್ನ ಚೆಕ್ಕುಗಳು ಕಾಣೆಯಾಗಿರುವ ಬಗ್ಗೆ ಹಾಗೂ ಸದರಿ ಚೆಕ್ಕುಗಳನ್ನು ಹಾಜರುಪಡಿಸಿದರೆ ಹಣವನ್ನು ತಡೆ ಹಿಡಿಯಲು ಕೋರಿ (Stop payment) ದಿನಾಂಕ 22.11.2017 ರಂದು ಅರ್ಜಿಯನ್ನು ಸಲ್ಲಿಸಿರುತ್ತೇನೆ.

ದಿನಾಂಕ 25.05.2022 ರಂದು ನನ್ನ ಖಾತೆಗೆ ಚೆಕ್ಕನ್ನು ಹಾಜರುಪಡಿಸಿದ್ದು ಸದರಿ ಚೆಕ್ಕು stop payment ಆಗಿ ನನ್ನ ಫೋನ್ ನಂಬರಿಗೆ ಮೆಸೇಜ್ ಬಂದಿರುತ್ತದೆ. ನನಗೆ ಬಂದ ಮೆಸೇಜ್ ನಲ್ಲಿ ಸದರಿ ಚೆಕ್ಕನ್ನು ರವಿಕುಮಾರ್ ಎಂಬುವವರು ಹಾಜರುಪಡಿಸಿರುವುದಾಗಿ ನಮೂದು ಇರುತ್ತದೆ. ತದನಂತರ ನನಗೆ ಸದರಿ ರವಿಕುಮಾರ್ ರವರಿಂದ ದಿನಾಂಕ 25.05.2022 ರಂದು ಕಾನೂನು ತಿಳುವಳಿಕೆ ಪತ್ರವು ನನಗೆ ಬಂದಿರುತ್ತದೆ. ಆದರೆ ನನಗೆ ಸದರಿ ರವಿಕುಮಾರ್ ರವರು ಯಾರೆಂದು ತಿಳಿಯದೆ ಇದ್ದರಿಂದ ನಾನು ದಿನಾಂಕ 04.06.2022 ರಂದು ನನ್ನ ವಕೀಲರ ಮೂಲಕ ಪ್ರತ್ಯುತ್ತರದ ನೋಟೀಸನ್ನು ಸದರಿ ರವಿಕುಮಾರ್ ರವರಿಗೆ ಕಳುಹಿಸಿರುತ್ತೇನೆ.

ನಮ್ಮ ಶಾಲೆಯಲ್ಲಿ ನನ್ನ ಸಹೋದ್ಯೋಗಿಗಳಾದ ಮಂಗಳರವರು ತನ್ನ ಸಹೋದರನಾದ ರವಿಕುಮಾರ್ ನೊಂದಿಗೆ ಶರೀಕ್ ಆಗಿ ನನ್ನಿಂದ ಹಣವನ್ನು ಒಡೆಯುವ ಉದ್ದೇಶದಿಂದ ನನ್ನ ಚೆಕ್ಕುಗಳನ್ನು ದುರುಪಯೋಗಪಡಿಸಿಕೊಂಡಿರುವುದಾಗಿ ನನಗೆ ತಿಳಿದುಬಂದಿರುತ್ತದೆ. ಸದರಿ ವಿಚಾರಗಳನ್ನು ನಾನು ನನ್ನ ವಕೀರಿಗೆ ತಿಳಿಸಿರುತ್ತೇನೆ.

ತದನಂತರ ಆರೋಪಿಯು ನನ್ನ ವಿರುದ್ಧ ಈ ಪ್ರಕರಣವನ್ನು ದಾಖಲಿಸಿದ್ದು ನ್ಯಾಯಾಲಯದಿಂದ ನೋಟೀಸು ನನಗೆ ತಲುಪಿದ್ದು, ನನ್ನ ವಕೀಲರ ಮೂಲಕ ನ್ಯಾಯಾಲಯಕ್ಕೆ ಹಾಜರಾಗಿರುತ್ತೇನೆ. ನಾನು ಸದರಿ ರವಿಕುಮಾರ್ ರವರಿಂದ ಯಾವುದೇ ಹಣವನ್ನು ಪಡೆದುಕೊಂಡಿರುವುದಿಲ್ಲ ಮತ್ತು ನನ್ನ ಚೆಕ್ಕುಗಳನ್ನು ಸದರಿ ರವಿಕುಮಾರ್ ರವರಿಗೆ ನೀಡಿರುವುದಿಲ್ಲ. ನಾನು ರವಿಕುಮಾರ್ ರವರಿಂದ ಸಾಲವನ್ನು ಪಡೆದುಕೊಳ್ಳಲು ನನಗೆ ಯಾವುದೇ ಅವಶ್ಯಕತೆ ಇರಲಿಲ್ಲ. ಆದ್ದರಿಂದ ಈ ಪ್ರಕರಣವನ್ನು ವಜಾಗೊಳಿಸಬೇಕೆಂದು ಪ್ರಾರ್ಥಿಸಿರುತ್ತೇನೆ.

ಸಾಕ್ಷಿಯು ಮೈಸೂರಿನ ನಸರಬಾದ್ ಪೊಲೀಸ್ ಠಾಣೆಗೆ ನೀಡಿದ ದೂರಿನ ಹಿಂಬರಹವನ್ನು ಹಾಜರುಪಡಿಸಿದ್ದು ಅದನ್ನು ನಿಡಿ.1 ಎಂದು ಗುರುತಿಸಲಾಯಿತು.

ಮೈಸೂರಿನ ನಸರಬಾದ್ ಪೊಲೀಸ್ ಠಾಣೆಯವರು ನೀಡಿದ ಸ್ವೀಕೃತಿಯನ್ನು ಹಾಜರುಪಡಿಸಿದ್ದು ಅದನ್ನು ನಿಡಿ.2 ಎಂದು ಗುರುತಿಸಲಾಯಿತು.

ಮೈಸೂರಿನ ಹೆಬ್ಬಾಳ್ ಶಾಖೆಯ ಎಸ್.ಬಿ.ಐ. ಬ್ಯಾಂಕಿನವರು ನೀಡಿದ 03 stop payment ಲಿಸ್ಟನ್ನು ಹಾಜರುಪಡಿಸಿದ್ದು ಅವುಗಳನ್ನು ಕ್ರಮವಾಗಿ ನಿಡಿ.3 ರಿಂದ 5 ಎಂದು ಗುರುತಿಸಲಾಯಿತು.

ದಿನಾಂಕ 04.06.2022 ರಂದು ಪ್ರತ್ಯುತ್ತರದ ನೋಟೀಸನ್ನು ಹಾಜರುಪಡಿಸಿದ್ದು ಅದನ್ನು ನಿಡಿ.6 ಎಂದು ಗುರುತಿಸಲಾಯಿತು.

ಅಂಚೆ ರಶೀದಿಯನ್ನು ಹಾಜರುಪಡಿಸಿದ್ದು ಅದನ್ನು ನಿಡಿ.7 ಎಂದು ಗುರುತಿಸಲಾಯಿತು.

ಅಂಚೆ ಸ್ವೀಕೃತಿಯನ್ನು ಹಾಜರುಪಡಿಸಿದ್ದು ಅದನ್ನು ನಿಡಿ.8 ಎಂದು ಗುರುತಿಸಲಾಯಿತು.

**(ಪಾಟೀ ಸವಾಲಿಗೆ ಸಮಯಾವಕಾಶ ಕೋರಿದ್ದು, ಸಮಯಾವಕಾಶ ನೀಡಲಾಯಿತು)**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿದನ್ನು ಬೆರಳಚ್ಚುಗಾರರಿಗೆ ಉಕ್ತಲೇಖನ ನೀಡಿ ಬೆರಳಚ್ಚು ಮಾಡಿಸಲಾಯಿತು)

ಓ ಹೇ ಕೇ ಸ ಇ ಒ,

sd/-

1 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು
ಪ್ರ.ದ.ನ್ಯಾ.ದಂ.,ರವರು, ಕಡೂರು.